

ಅವಳನ್ನು ಹಾದು ಹೋಯಿತು. ಚಾಲಕ ಕೋಪದಲ್ಲಿ ಕಿಟಿಕಿಯಲ್ಲಿ ಹಿಂದೆ ಇಣುಕಿ ‘ಸಾಲಿ... ಮರ್ನೆಕಾ ಕ್ಯಾ?’ ಎಂದು ಬೊಬ್ಬೆಯಿಟ್ಟ! ಆತ ಬ್ರೇಕು ಹಾಕಿ ಪಕ್ಕಕ್ಕೆ ಸರಿಸಿದ್ದು ಎಷ್ಟು ತೀವ್ರವಾಗಿತ್ತೆಂದರೆ ಹಲಸು ತುಂಬಿದ್ದ ಲಾರಿಯ ಲೋಡಿನಿಂದ ಹಲಸೊಂದು ಹೊರಕ್ಕೆ ಎಸೆಯಲ್ಪಟ್ಟಿತ್ತು!

ತನ್ನ ಫಲಿಸದ ಆತ್ಮಹತ್ಯೆ ಯತ್ನ, ಚಾಲಕನ ಕೋಪದ ಬೊಬ್ಬೆ, ಹಲಸು ರಸ್ತೆಗೆ ಬಿದ್ದದ್ದು ಇವುಗಳೆಲ್ಲ ಕ್ಷಣದಲ್ಲಿ ನಡೆದುಹೋಗಿದ್ದವು. ಅವುಗಳ ಪ್ರಭಾವದಿಂದ ಹೊರಬರುತ್ತಲೇ ರುದ್ರಿಯ ಮನಸ್ಸು ಕೆಳಗೆ ಬಿದ್ದು ಉರುಳುತ್ತ ಹಿಂದೆ ಹೋಗಿ ರಸ್ತೆಯ ನಡುವಿನಲ್ಲಿ ನಿಲುಗಡೆಗೆ ಬಂದಿದ್ದ ಹಲಸಿನ ಕಡೆ ಗಮನಕೊಟ್ಟಿತ್ತು. ರುದ್ರಿ ಒಮ್ಮೆ ಹಿಂತಿರುಗಿ ನೋಡಿದಳು. ಲಾರಿಯವ ಹೆದ್ದಾರಿಯಲ್ಲಿ ಮತ್ತೆ ಗೂಳಿಯ ಆರ್ಭಟದೊಂದಿಗೆ ಹೊರಟುಹೋಗುತ್ತಿದ್ದ. ಅವನೇನೂ ಹಿಂದೆ ಬರುವುದಿಲ್ಲ. ಅಂದರೆ ಕೆಳಗೆ ಬಿದ್ದ ಹಲಸು ಇನ್ನು ತನ್ನದೇ! ತನಗೂ ಮಕ್ಕಳಿಗೂ ತಿನ್ನಲು ಹಲಸು!...

ರುದ್ರಿ ಸಂತಸದಿಂದ ಹೋಗಿ ಹಲಸನ್ನು ಎತ್ತಿಕೊಳ್ಳಲು ನೋಡಿದಳು. ಸುಮಾರು ಇಪ್ಪತ್ತು ಕೇಜಿ ಇರಬಹುದೇನೋ... ಬಿದ್ದ ರಭಸಕ್ಕೆ ಒಡೆದು ಬಾಯಿ ಬೇರೆ ಬಿಟ್ಟಿತ್ತು. ಆಕೆಗೆ ಅದನ್ನು ನೆಲದಿಂದ ಎತ್ತಲಾಗಲಿಲ್ಲ. ಕಷ್ಟಪಟ್ಟು ಅದನ್ನು ಹೊರಳಿಸಿಕೊಂಡು ರಸ್ತೆಯ ಪಕ್ಕಕ್ಕೆ ಸರಿಸಿ ಬೇರೆ ವಾಹನಗಳ ಚಕ್ರದಡಿಗೆ ಸಿಕ್ಕಿ ಅಪ್ಪಚ್ಚಿಯಾಗದಂತೆ ತಪ್ಪಿಸಿದಳು.

ಇನ್ನೇನು ಮಾಡುವುದು? ಇದನ್ನು ಗುಡಿಸಲಿಗೆ ಒಯ್ಯುವುದು ಹೇಗೆ! ನಡು ಮಧ್ಯಾಹ್ನ ಬೇರೆ. ಗುಡಿಸಲೂ ಹತ್ತಿರದಲ್ಲೇನೂ ಇಲ್ಲ. ಯಾರಾದರೂ ಎತ್ತಿ ತಲೆಯ ಮೇಲಿಟ್ಟರೆ ಈ ಯಮಭಾರವನ್ನೂ ಹೊತ್ತು ಸಂತೋಷದಿಂದ ನಡೆದೇನು ಎಂದಿತು ಮನಸ್ಸು. ಎತ್ತಿಡಲು ಇಲ್ಲಿ